**ದಿನಾಂಕಃ 09-10-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್.ಎಲ್.ಎಸ್. ಆರೋಪಿ ಪರ ವಕೀಲರಿಂದಃ**

**5.** ಸಿಸಿ ನಂಃ15/2021 ರಲ್ಲಿ ನಿಮ್ಮ ಆರೋಪಿ ಎಂದರೆ ಹೌದು. ಸದರಿ ದಾಖಲೆಯನ್ನು **ನಿಡಿ-2** ಎಂದು ಗುರುತಿಸಲಾಯಿತು. ಸಿಸಿ ನಂಃ559/2020, 349/2020, 61/2020 ರ ಆದೇಶದ ದೃಢೀಕೃತ ಪ್ರತಿಗಳನ್ನು ಸಾಕ್ಷಿಗೆ ತೋರಿಸಿದ್ದು ಹಾಗೂ ಅದರಲ್ಲಿ ನೀವು ಆರೋಪಿತರು ಹಾಗೂ ನಿಮಗೆ ಸಂಬಂಧಿಸಿದ ದಾಖಲೆ ಅಂದರೆ ಹೌದು. ಸದರಿ ದೃಢೀಕೃತ ದಾಖಲೆಗಳನ್ನು **ನಿಡಿ-3 ರಿಂದ 5** ಎಂದು ಗುರುತಿಸಲಾಯಿತು. ಸಿಸಿ ನಂಃ327/2021 ರ ಆದೇಶದ ದೃಢೀಕೃತ ಪ್ರತಿಯನ್ನು ಸಾಕ್ಷಿಗೆ ತೋರಿಸಿದ್ದು ಹಾಗೂ ಅದರಲ್ಲಿ ನೀವು ಆರೋಪಿತರು ಹಾಗೂ ನಿಮಗೆ ಸಂಬಂಧಿಸಿದ ದಾಖಲೆ ಅಂದರೆ ಹೌದು. ಸದರಿ ದೃಢೀಕೃತ ದಾಖಲೆಯನ್ನು **ನಿಡಿ-6** ಎಂದು ಗುರುತಿಸಲಾಯಿತು.

**6.** ಕಾನೂನು ಬಾಹಿರ ಚಟುವಟಿಕೆಗಳಲ್ಲಿ ನೀವು ತೊಡಗಿದ್ದರಿಂದ ಮೇಲೆ ಕಾಣಿಸಿದ ಪ್ರಕರಣಗಳಲ್ಲಿ ನೀವು ದಂಡ ತುಂಬಿರುತ್ತೀರಿ ಅಂದರೆ ಹೌದು. ಇದನ್ನು ಹೊರತು ಪಡಿಸಿ ಹಾವೇರಿ ಬೇರೆ ಬೇರೆ ನ್ಯಾಯಾಲಯದಲ್ಲಿ ಎಷ್ಟು ಪ್ರಕರಣ ದಾಖಲೆ ಮಾಡಿದ್ದೀರಿ ಅಂದರೆ ಎರಡು ಪ್ರಕರಣ ದಾಖಲೆ ಮಾಡಿದ್ದೇನೆ. ಪಿಸಿಆರ್ 221/2019 ರ ದೂರಿನ ದೃಢೀಕೃತ ನಕಲನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು **ನಿಡಿ-7** ಎಂದು ಗುರುತಿಸಲಾಯಿತು. ಈ ಪ್ರಕರಣ ಅಲ್ಲದೇ ಹಾವೇರಿ ನ್ಯಾಯಾಲಯದ ಬೇರೆ ಎನ್.ಐ.ಆ್ಯಕ್ಟ್ ಕಾಯ್ದೆ ಪ್ರಕರಣಗಳು ಇವೆ ಅಂದರೆ ಸರಿಯಲ್ಲ. ಆ ಎಲ್ಲ ಬ್ಯಾಂಕ ಖಾತೆಗಳ ವಾರ್ಷಿಕ ಆದಾಯ ರೂ.3,50,000/- ದಾಟಿರುವುದಿಲ್ಲ ಅಂದರೆ ಸರಿಯಲ್ಲ.

**7.** ಹಣಕಾಸನ್ನು ನೀಡುವ ಸಾಮರ್ಥ್ಯವನ್ನು ಹೊಂದಿರುತ್ತೇನೆ ಅನ್ನುವ ಬಗ್ಗೆ ದಾಖಲೆಗಳನ್ನು ನೀಡಿರುವುದಿಲ್ಲ ಅಂದರೆ ನೀಡಿರುವುದಿಲ್ಲ. ಅಂತಹ ದಾಖಲೆಗಳನ್ನು ಮಾನ್ಯ ನ್ಯಾಯಾಲಯಕ್ಕೆ ನೀಡಲು ತೊಂದರೆ ಇರುವುದಿಲ್ಲ ಅಂದರೆ ಇರುವುದಿಲ್ಲ. ನಾನು ಬಿಪಿಎಲ್ ಪಡಿತರ ಚೀಟಿ ಹೊಂದಿರುವುದಿಲ್ಲ. ಹಾವೇರಿ ಪೋಲಿಸರು ನಿಮಗೆ ರೌಡಿ ಶೀಟರ್ ಅಂತಾ ಮಾಡಿದ್ದಾರೆ ಅಂದರೆ ಸರಿಯಲ್ಲ. ವಕಾಲತ್‌ನಲ್ಲಿ ಇರುವ ಆರೋಪಿಯ ಸಹಿಗೂ ಮತ್ತು ನಿಪಿ-1 ಚೆಕ್‌ನಲ್ಲಿ ಇರುವ ಸಹಿಗೂ ವ್ಯತ್ಯಾಸ ಇದೆ ಅಂದರೆ ಅದು ಅವರ ಮೇಲೆ ಅವಲಂಬಿತವಾಗಿರುತ್ತದೆ. ವಕಾಲತ್‌ನಲ್ಲಿ ಇರುವ ಆರೋಪಿಯ ಸಹಿಗೂ ಮತ್ತು ನಿಪಿ-1 ಚೆಕ್‌ನಲ್ಲಿ ಇರುವ ಸಹಿಗೂ ವ್ಯತ್ಯಾಸ ಇದೆ ಅಂದರೆ ಸರಿಯಲ್ಲ. ಈಗ ತೋರಿಸುತ್ತಿರುವ ದಾಖಲೆಯಲ್ಲಿ ಇರುವ ಸಹಿ ನಿಮ್ಮದೇ ಅಂದರೆ ಹೌದು. ದಿನಾಂಕಃ 06-02-2020 ರಂದು ಆದ ರಾಜೀ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು **ನಿಡಿ-8** ಎಂದು ಗುರುತಿಸಲಾಯಿತು. ಆ ದಾಖಲೆಯಲ್ಲಿ ಬೇರೆ ಯಾರು ಸಹಿ ಮಾಡಿದ್ದಾರೆ ಅಂದರೆ ಸಂಜು ಗೊಂದಳೆ, ಅನಿಲ ಎನ್ನುವರುಸಹಿ ಮಾಡಿರುತ್ತಾರೆ. ಅದರಲ್ಲಿರುವ ಸಹಿ ಆರೋಪಿಯದ್ದು ಮತ್ತು ಆತನ ತಮ್ಮನದ್ದು ಇರುತ್ತದೆ.

**(ದೂರುದಾರರು ಸಮಯ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)**

ಓ ಹೇ ಕೇ ಸರಿ ಇದೆ.

-Sd/-
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.